# ವಚನಕಾರ್ತಿಯರಲ್ಲಿ ಬಂಡಾಯದ ನೆಲೆಗಳು

**ಪ್ರಕಾಶ**

ಸಹಾಯಕ ಪ್ರಧ್ಯಾಪಕರು, ಕನ್ನಡ ವಿಭಾಗ, ದಯಾನಂದ ಸಾಗರ್ ಬಿಸಿನೆಸ್ ಅಕಾಡೆಮಿ, ಬೆಂಗಳೂರು.

DOI: https://doi.org/10.5281/zenodo.15490899

## ABSTRACT:

೧೨ನೇ ಶತಮಾನದ ವಚನಚಳವಳಿಯೇ ಚಾರಿತ್ರಿಕವಾಗಿ ಬಹುದೊಡ್ಡ ಪ್ರಮಾಣದ ಬಂಡಾಯಕ್ಕೆ ನೂತನ ಅಯಾಸವನ್ನು ನೀಡಿತು. ಸುಮಾರು ಮೂವತ್ತೆರಡು ಜನ ಶರಣೆಯರು ವಚನಗಳನ್ನು ರಚಿಸಿ ಶ್ರೇಷ್ಠ ಚಿಂತಕಿಯರಾದರು ಅವರು ಸಮಾಜದ ಡಾಂಭಿಕತೆಯ ವಿರುದ್ಧ ಪ್ರತಿಭಿಟಿಸಿದ ರೀತಿ ಅಗಮ್ಯವಾದುದು. ಲಿಂಗಭೇದ ನಿರಾಕರಣೆ, ಮನೋಪ್ರವೃತ್ತಿಗಳ ವಿರುದ್ಧ ಪ್ರತಿಭಟನೆ ಮಾಡಿರುವುದು ಅವರ ಜ್ಞಾನ, ಆತ್ಮಸ್ಥೈರ್ಯ ಹಾಗೂ ಅವರ ಒಳಗಿನ ಬಂಡಾಯ ಗುಣಕ್ಕೆ ಸಾಕ್ಷಿಯಾಗಿದೆ.

ಪುರುಷ ಪ್ರಧಾನ ಸಮಾಜವು ತನ್ನ ಹಿತಾಶಕ್ತಿಯನ್ನು ಕಾಯ್ದುಕೊಂಡು ಮಹಿಳೆಯನ್ನು ಕತ್ತಲೆಯ ಕೂಪಕ್ಕೆ ತಳ್ಳಿತ್ತು ೧೨ನೇಯ ಶತಮಾನದ ಬಸವಾದಿ ಶರಣರು ಮಹಿಳೆಯರ ಬದುಕಿನಲ್ಲಿದ್ದ ಕತ್ತಲೆಯನ್ನು ಸರಿಸಿ ಬೆಳಕಿನ ಮಾರ್ಗವನ್ನು ದರ್ಶಿಸಿದರು ಮನುಷ್ಯನ ಸಣ್ಣತನವನ್ನು ಶಮನಗೊಳಿಸಿ ಸಮಾನತೆಯ ತಳಹದಿಯ ಮೇಲೆ ಮಾನವೀಯವಾದ ಸಮಸಂಸ್ಕೃತಿಯ ಸಮಾಜವನ್ನು ನಿರ್ಮಿಸಿಹೊರಟ ಶರಣರು ಸಮಾನತೆಯನ್ನೇ ಪ್ರಧಾನ ಆಶಯವನ್ನಾಗಿಸಿಕೊಂಡಿದ್ದರು. ಆಧ್ಯಾತ್ಮಿಕ ಸಾಧನೆಗಳಲ್ಲಿ ಹೆಣ್ಣಿಗೆ ಸ್ವಾತಂತ್ರ್ಯವನ್ನು ನೀಡಿ , ಹೆಣ್ಣು ಜೀವಕ್ಕೆ ಅಂಟಿದ್ದ ಎಲ್ಲ ಬಗೆಯ ಸೂತಕಗಳನ್ನು ಕಿತ್ತೊಗೆದರು, ಇದರಿಂದ ಮಹಿಳೆಯರಿಗೆ ಶಿಕ್ಷಣ, ಸಮಾಜಸೇವೆ, ಆಧ್ಯಾತ್ಮಿಕ ಸಾಧನೆ ಸಾಹಿತ್ಯಾಭಿವ್ಯಕ್ತಿಗಳು ಸಾಧ್ಯವಾದವು. ಮಹಿಳೆಯ ಅನುಭವ, ಚಿಂತನೆಗಳ ಗಡಿ ಜಗದಗಲ, ಮುಗಿದಗಲಕ್ಕೆ ವಿಸ್ತರಿಸಿದವು, ಮಾನುಧರ್ಮಶಾಸ್ತ್ರ ನಿರ್ಮಿಸಿದ ಕೌಟುಂಬಿಕ ಚೌಕಟ್ಟನ್ನು ಒಡೆದು ಹೆಣ್ಣಿಗೂ ಸ್ವತಂತ್ರವಾದ ಅಸ್ತಿತ್ವವಿದೆ ಎಂಬುದನ್ನು ಶಿವಶರಣೆಯರು ತಮ್ಮ ಜೀವನ ಸಾಧನೆಯ ಮೂಲಕ ಸಾಬೀತುಪಡಿಸಿದರು.

## KEYWORDS:

ಲಿಂಗಭೇದ, ಆತ್ಮಸ್ಥೈರ್ಯ, ಸಾಕ್ಷಾತ್ಕಾರ, ತಳಸ್ತರ, ತಳಸಮುದಾಯ, ಶ್ರಮಸಂಸ್ಕೃತಿ, ಸೂತ್ರಕರ್ಣ.

12ನೇ ಶತಮಾನದ ವಚನಚಳವಳಿಯೇ ಚಾರಿತ್ರಿಕವಾಗಿ ಬಹುದೊಡ್ಡ ಪ್ರಮಾಣದ ಬಂಡಾಯಕ್ಕೆ ನೂತನ ಅಯಾಸವನ್ನು ನೀಡಿತು. ಸುಮಾರು ಮೂವತ್ತೆರಡು ಜನ ಶರಣೆಯರು ವಚನಗಳನ್ನು ರಚಿಸಿ ಶ್ರೇಷ್ಠ ಚಿಂತಕಿಯರಾದರು ಅವರು ಸಮಾಜದ ಡಾಂಭಿಕತೆಯ ವಿರುದ್ಧ ಪ್ರತಿಭಟಿಸಿದ ರೀತಿ ಅಗಮ್ಯವಾದುದು. ಲಿಂಗಭೇದ ನಿರಾಕರಣೆ, ಮನೋಪ್ರವೃತ್ತಿಗಳ ವಿರುದ್ಧ ಪ್ರತಿಭಟನೆ ಮಾಡಿರುವುದು ಅವರ ಜ್ಞಾನ, ಆತ್ಮಸ್ಥೈರ್ಯ ಹಾಗೂ ಅವರ ಒಳಗಿನ ಬಂಡಾಯ ಗುಣಕ್ಕೆ ಸಾಕ್ಷಿಯಾಗಿದೆ.

ಪುರುಷ ಪ್ರಧಾನ ಸಮಾಜವು ತನ್ನ ಹಿತಾಶಕ್ತಿಯನ್ನು ಕಾಯ್ದುಕೊಂಡು ಮಹಿಳೆಯನ್ನು ಕತ್ತಲೆಯ ಕೂಪಕ್ಕೆ ತಳ್ಳಿತ್ತು 12ನೇಯ ಶತಮಾನದ ಬಸವಾದಿ ಶರಣರು ಮಹಿಳೆಯರ ಬದುಕಿನಲ್ಲಿದ್ದ ಕತ್ತಲೆಯನ್ನು ಸರಿಸಿ ಬೆಳಕಿನ ಮಾರ್ಗವನ್ನು ದರ್ಶಿಸಿದರು ಮನುಷ್ಯನ ಸಣ್ಣತನವನ್ನು ಶಮನಗೊಳಿಸಿ ಸಮಾನತೆಯ ತಳಹದಿಯ ಮೇಲೆ ಮಾನವೀಯವಾದ ಸಮಸಂಸ್ಕೃತಿಯ ಸಮಾಜವನ್ನು ನಿರ್ಮಿಸಿಹೊರಟ ಶರಣರು ಸಮಾನತೆಯನ್ನೇ ಪ್ರಧಾನ ಆಶಯವನ್ನಾಗಿಸಿಕೊಂಡಿದ್ದರು. ಆಧ್ಯಾತ್ಮಿಕ ಸಾಧನೆಗಳಲ್ಲಿ ಹೆಣ್ಣಿಗೆ ಸ್ವಾತಂತ್ರ್ಯವನ್ನು ನೀಡಿ, ಹೆಣ್ಣು ಜೀವಕ್ಕೆ ಅಂಟಿದ್ದ ಎಲ್ಲ ಬಗೆಯ ಸೂತಕಗಳನ್ನು ಕಿತ್ತೊಗೆದರು, ಇದರಿಂದ ಮಹಿಳೆಯರಿಗೆ ಶಿಕ್ಷಣ, ಸಮಾಜಸೇವೆ, ಆಧ್ಯಾತ್ಮಿಕ ಸಾಧನೆ ಸಾಹಿತ್ಯಾಭಿವ್ಯಕ್ತಿಗಳು ಸಾಧ್ಯವಾದವು. ಮಹಿಳೆಯ ಅನುಭವ, ಚಿಂತನೆಗಳ ಗಡಿ ಜಗದಗಲ, ಮುಗಿದಗಲಕ್ಕೆ ವಿಸ್ತರಿಸಿದವು, ಮಾನುಧರ್ಮಶಾಸ್ತ್ರ ನಿರ್ಮಿಸಿದ ಕೌಟುಂಬಿಕ ಚೌಕಟ್ಟನ್ನು ಒಡೆದು ಹೆಣ್ಣಿಗೂ ಸ್ವತಂತ್ರವಾದ ಅಸ್ತಿತ್ವವಿದೆ ಎಂಬುದನ್ನು ಶಿವಶರಣೆಯರು ತಮ್ಮ ಜೀವನ ಸಾಧನೆಯ ಮೂಲಕ ಸಾಬೀತುಪಡಿಸಿದರು.

ಶರಣ ಧರ್ಮದ ಸ್ತ್ರೀಪರವಾದ ಶತ್ವಚಿಂತನೆಗಳು ಭಾರತ ದೇಶದೆಲ್ಲೆಡೆ ಹರಡಿದವು ಇದರಿಂದ ಪ್ರಭಾವಿತರಾದ ರಾಜರು-ರಾಣಿಯರು, ಮೊದಲುಗೊಂಡು ವಿವಿಧ ಪ್ರಾಂತಗಳ ಜನರು ಶರಣ ಸಮುದಾಯಕ್ಕೆ ಬಂದು ಸೇರಿದರು. ವಿವಿಧ ಸ್ತರಗಳಿಂದ ಬಂದ ಶರಣೆಯರು ಜಾತಿ-ಮತ, ಅಂತಸುಗಳೆಂಬ ಭೇದವನ್ನು ತೊರೆದು ತಮ್ಮದೇಯಾದ ಕಾಯಕದಲ್ಲಿ ನಿರತರಾಗಿ, ಅನುಭವ ಮಂಟಪದ ಚರ್ಚೆಗಳಲ್ಲಿ ಬಾಗವಹಿಸಿ ತಮ್ಮ ಚಿಂತನೆಗಳನ್ನು ಮಂಡಿಸುತ್ತಿದ್ದರು ಕೌಟುಂಬಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ-ಹೀಗೆ ಅನುಭವಗಳನ್ನು ತಮ್ಮ ವಚನಗಳಲ್ಲಿ ಅಭಿವ್ಯಕ್ತಿಸಿರುವುದು ಜಾಗತಿಕ ಮಟ್ಟದಲ್ಲಿ ಉತ್ಕೃಷ್ಟವಾದ ಸಾಹಿತ್ಯವಾಗಿ ಗುರುತಿಸಿಕೊಂಡಿದೆ.

ಅವರ ಅಭಿವ್ಯಕ್ತಿಯ ಸ್ವರೂಪವು ಸಹ ತೀರಾ ಸರಳವಾಗಿದ್ದು, ಭಾವನೆಗಳು

ಜಾಗೃತಗೊಡಾಗ ಅದಕ್ಕೆ ತಕ್ಕಂತೆ ತಮ್ಮದೇ ಆದ ಆಡುಮಾತುಗಳಲ್ಲಿ ಸಹಜ ಸ್ಫೂರ್ತಿಯಿಂದ ವಚನ ರಚನೆ ಮಾಡಿ ಸಾಹಿತ್ಯದ ಮತ್ತು ಜೀವನ ಮೌಲ್ಯಗಳ ಬೆಲೆ ಹೆಚ್ಚಿಸಿದರು. 'ಪಾತಾಳದಗ್ಘಣಿಯ ನೇಣಿಲ್ಲದೆ ಸೋಪಾನ ಬಲದಿಂದಲ್ಲದೆ ತೆಗೆಯಬಹುದೇ? ಶಬ್ದ ಸೋಪಾನಕಟ್ಟಿ ನಡೆಸಿದವರು ಪುರಾತನರು, ದೇವಲೋಕಕ್ಕೆ ಬಟ್ಟೆಕಾಣಿರೋ, ಮರ್ತ್ಯಲೋಕದವರ ಮನದ ಮೈಲಿಗೆಯ ಕಳೆಯಲೆಂದು ಗೀತೆ ಮಾತೆಂಬ ಜ್ಯೋತಿಯ ಬೆಳಗಿ ಕೊಟ್ಟರು ಕೂಡಲ ಚೆನ್ನಸಂಗನ ಶರಣರು' ಎಂಬ ಚೆನ್ನಬಸವಣ್ಣನವರ ವಚನವು ವಚನಕಾರ್ತಿಯರ "ಸಾಹಿತ್ಯಾಭಿಕ್ತಿಗೆ ಭಾಷ್ಯ ಬರೆಯುತ್ತದೆ"[1] ಎಂಬ ಅಭಿಪ್ರಾಯ ವಚನಕಾರ್ತಿಯರ ಬದುಕಿನ ಮಹತ್ತನ್ನು ಕಟ್ಟಿಕೊಡುತ್ತದೆ.

ಅಕ್ಕಮಹಾದೇವಿ, ಅಕ್ಕನಾಗಮ್ಮ, ಗಂಗಾಂಬಿಕೆ, ನೀಲಾಂಬಿಕೆ, ಮೋಳಿಗೆ ಮಹಾದೇವಿ, ಬೋಂತಾದೇವಿ ಇವರನ್ನು ಬಿಟ್ಟರೆ ಉಳಿದ ಎಲ್ಲ ವಚನಕಾರ್ತಿಯರು ತಳಸಮುದಾಯದವರಾಗಿದ್ದಾರೆ. ಅಕ್ಕಮಹಾದೇವಿಯ ವಚನಗಳಲ್ಲಿ ಹೆಚ್ಚು ಸತಿ–ಪತಿಭಾವವನ್ನು ಕಾಣಬಹುದು. ವಿವಾಹವಾಗಿಯೂ ದಾಂಪತ್ಯವನ್ನು ದಿಕ್ಕರಿಸಿ ಹೊರಬಂದ ಅಕ್ಕಮಹಾದೇವಿ ಹೆಣ್ಣು ಜೀವಕ್ಕೆ ಅಗತ್ಯವಾದ ಆಯ್ಕೆ ಸ್ವಾತಂತ್ರ್ಯಕ್ಕೆ ತನ್ನ ಬದುಕಿನ ಮೂಲಕವೇ ಹಕ್ಕೊತ್ತಾಯಿಸಿದ್ದಾಳೆ. ಬೊಂತಾದೇವಿಯೂ ವಿವಾಹಕ್ಕೆ ಒತ್ತು ನೀಡದೆ ಶವಸೇನೆಯಲ್ಲಿಯೇ ಸಾಕ್ಷಾತ್ಕಾರ ಕಾಣುತ್ತಾಳೆ. ಮೋಳಿಗೆ ಮಹಾದೇವಿ ಮಹಾದೇವಿ ಅರಮನೆಯನ್ನು ತೊರೆದು ಶರಣಧರ್ಮದ ಚಳವಳಿಯಲ್ಲಿ ಭಾಗವಹಿಸಿ ಕಟ್ಟಿಗೆ ಆಯುವ ವೃತ್ತಿಯನ್ನು ನಿರ್ವಹಿಸಿ ಕಾಯಕತತ್ವವನ್ನು ಮೆರೆಯುತ್ತಾಳೆ.

ಅಕ್ಕನಾಗಮ್ಮನ ವಿಶೇಷತೆಯೆಂದರೆ ಶರಣ ಧರ್ಮದ ಆಂದೋಲನದ ಹರಿಕಾರನಾದ ಬಸವಣ್ಣನನ್ನು ಹಾಗೂ ಷಟಸ್ಥಲ ಸಿದ್ಧಾಂತದ ಹರಿಕಾರನಾದ ಚೆನ್ನಬಸವಣ್ಣನನ್ನು ಘೋಷಿಸಿ ಸಲುಹಿದ ಕೀರ್ತಿ ಈಕೆಯದಾಗಿದೆ. ಗಂಗಾಂಬಿಕೆ ಮತ್ತು ನೀಲಾಂಬಿಕೆಯರು ಬಸವಣ್ಣನ ಪತ್ನಿಯರಾಗಿದ್ದು, ನೀಲಾಂಬಿಕೆ ಅಭಿವ್ಯಕ್ತಿ ಚುರುಕುತನದ ಮೂಲಕ ಬಸವಣ್ಣನ ವಿಚಾರ ಪತ್ನಿಯಾಗಿ ಪ್ರಸಿದ್ಧಿಯಾಗಿದ್ದಾಳೆ. ಇವರ ವಚನಗಳಲ್ಲಿ ಕಂಡುಬರುವ ಬಂಡಾಯದ ಸ್ವರೂಪವನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸಲಾಗಿದೆ.

» ಅಕ್ಕಮಹಾದೇವಿ ವಿಚಾರ ಸ್ವಾತಂತ್ರ್ಯದ ಮಹಿಳೆ, ಇಹದ ಗಂಡರನ್ನು ತಿರಸ್ಕರಿಸಿ ಆಯ್ಕೆಯ ಸ್ವಾತಂತ್ರ್ಯವನ್ನು ಮೆರೆದು ಇತಿಹಾಸದಲ್ಲಿಯೇ ಅಪರೂಪದ ಮಹಿಳೆಯಾಗಿದ್ದಾಳೆ. ಈಕೆಯ ವಚನಗಳಲ್ಲಿ ಕೌಟುಂಬಿಕ ಅಸಮಾನತೆ, ಮನೋಪ್ರವೃತ್ತಿಗಳ ಖಂಡನೆ, ಲಿಂಗಬೇಧ ನಿರಾಕರಣೆ, ಜಾತಿ ವ್ಯವಸ್ಥೆಯ ವಿರುದ್ಧ ಪ್ರತಿಭಟನೆಯ ಅಂಶಗಳು ರಾಚುವಂತೆಯೆ ಕಾಣಸಿಗುತ್ತವೆ.

» ಅಕ್ಕನಾಗಮ್ಮ, ಗಂಗಾಂಬಿಕೆ, ನೀಲಾಂಬಿಕೆಯರ ವಚನಗಳಲ್ಲಿ ಸಾಮಾಜಿಕ ಬಂಡಾಯದ ಮನೋಧರ್ಮ ವಿರಳವಾಗಿದೆ. ಆದರೆ ನಿಲಾಂಬಿಕೆಯ ವಚನದಲ್ಲಿ ಲಿಂಗಭೇದನಿರಾಕರಣೆ ಅಭಿವ್ಯಕ್ತಿಯ ಸ್ವಾತಂತ್ರ್ಯ, ವೈಚಾರಿಕ ಚಿಂತನೆಗಳು ಗೋಚರಿಸುತ್ತವೆ. ಆದರೆ ಇತರ ವಚನಗಳಲ್ಲಿ ಬಸವಣ್ಣನ ಮೇಲೆ ತಾವು ಹೊಂದಿರುವ ಭಾವಾಭಿವ್ಯಕ್ತಿಯೇ ಹೆಚ್ಚಿರುವುದು ಗೋಚರವಾಗುತ್ತದೆ.

**"ಪತಿಯಾಜ್ಞೆಯಲ್ಲಿ ಚರಿಪ ಸತಿಗ್ಯಾಕೆ ಪ್ರತಿಜ್ಞೆಯು?**
**ಪ್ರತಿಜ್ಞೆಯ ಪತಿಕರದಲ್ಲಿ ಪೋಪದಿರೆ ಯಾತನೆಯಲ್ಲವೆ?**
**ಇವಳ ಲಿಂಗನಿಷ್ಠೆ ಇವಳಿಗೆ**
**ನಮ್ಮ ನಿಷ್ಠೆ ಪತಿಯಾಜ್ಞೆಯಲ್ಲಿ ಕಾಣಾ**
**ಗಂಗಾಪ್ರಿಯ ಕೂಟಲಸಂಗಮದೇವಾ"[2]**

–

**– ಗಂಗಾಂಬಿಕೆ**

**"ಬಸವನೆ ಮುಖಸೆಜ್ಜೆ, ಬಸವನೆ ಅಮಳೋಕ್ಯ**
**ಬಸವನ ನಾನೆತ್ತಿ ಮುದಾಡಿಸುವೆನು**
**ಬಸವಾ, ಸಂಗನ ಬಸವಿದೇವಾ ಜಯತು**
**ಬಸವಗೂ ಎನಗೂ ಭಾವಭೇದವಿಲ್ಲ;**
**ಬಸವಗೂ ಎನಗೂ ರಾಸಿಕೂಟವುಂಟು**
**ಬಸವಣ್ಣಪ್ರಿಯ ಚೆನ್ನಸಂಗಯ್ಯನಲ್ಲಿ**
**ಬಸವನ ಬೆಸಲಾದ ಬಾಣತಿ ನಾನಯ್ಯ**
**ಬಸವಾ, ಬಸವಾ, ಬಸವಾ!"[3]**

ನೀಲಾಂಬಿಕೆ ಬಸವಣ್ಣನಿಗೆ ವಿಚಾರ ಪತ್ನಿಯಂದು ಪ್ರಸಿದ್ಧಿ ಪಡೆದು ಬಹುಪಾಲು ವಚನಗಳಲ್ಲಿ ಬಸವಭಾವವೇ ತುಂಬಿರುವುದು ಕಂಡುಬರುತ್ತದೆ.

ಸಮಾಜದ ತಳಸ್ತರದಿಂದ ಬಂದ ವಚನಕಾರ್ತಿಯರಲ್ಲಿ ಸತ್ಯಕ್ಕ, ಆಯ್ದಕ್ಕಿ ಲಕ್ಕಮ್ಮ, ಉರಿಲಿಂಗಪೆದ್ದಿಗಳ ಪುಣ್ಯಸ್ತರೀ ಕಾಳವ್ವೆ, ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ, ಗೊಗ್ಗವ್ವೆ, ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ, ಅಮುಗೆ ರಾಯಮ್ಮ, ಅಕ್ಕಮ್ಮ, ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ, ಮುಕ್ತಾಯಕ್ಕ, ಕದಿರ ರೆಮ್ಮವ್ವೆ, ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ, ದುಗ್ಗಳೆ, ಗುಂಡಯ್ಯಘಳ ಪುಣ್ಯಸ್ತ್ರೀ ಕೇತಲದೇವಿ, ರೇವಣ ಸಿದ್ದಯ್ಯೆಗಳ ಪುಣ್ಯಸ್ತ್ರೀ ರೇಕಮ್ಮ, ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ, ಹಾದರಕಾಯೆಕದ ಪುಣ್ಯಸ್ತ್ರೀ ಗಂಗಮ್ಮ, ಕೊಂಡೆಮಂಚಣ್ಣಗಳ ಪುಣ್ಯಸ್ತ್ರೀಲಕ್ಷ್ಮಮ್ಮ, ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀರಾಯಮ್ಮ, ಸಿದ್ಧಬುದ್ದಯ್ಯೆಗಳ ಪುಣ್ಯಸ್ತ್ರೀ ಕಾಳವ್ವೆ, ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ, ಕನ್ನಡಿಕಾಯಕದ ರೇವಮ್ಮೆ, ಕೊಟ್ಟಣದ ಸೋಮವ್ವೆ, ಕಾಲಕಣ್ಣಿಯ ಕಾಮಮ್ಮ, ಸೂಳೆಸಂಕವ್ವೆ, ಕದಿರ ಕಾಯಕದ ಕಾಳವ್ವೆ–ಇವರೆ

ತಳಸಮುದಾಯದಿಂದ ಶರಣಚಳವಳಿಯಲ್ಲಿ ಭಾಗವಹಿಸಿ ತಮ್ಮ ಚಿಂತನೆಗಳಿಂದ ಪ್ರಸಿದ್ಧಿ ಪಡೆದ ಸಮಾಜಶಾಸ್ತ್ರಜ್ಞೆಯರಾಗಿದ್ದಾರೆ. ಸಾಹಿತ್ಯ ಚರಿತ್ರೆಗಳು ಹಾಗೂ ಶಿವಶರಣೆಯರ ವಚನ ಸಂಪುಟದಲ್ಲಿ ಉಲ್ಲೇಖವಾಗಿರುವ ವಿಚಾರಗಳನ್ನು ಹಾಗೂ ವಚನಕಾರ್ತಿಯರ ವಚನಗಳನ್ನು ಗಮನಿಸಿ ಮೇಲೆ ಉಲ್ಲೇಖವಾಗಿರುವ ವಚನಕಾರ್ತಿಯರನ್ನು ತಳಸಮುದಾಯದಿಂದ ಬಂದವರೆಂದು ನಿರ್ಧರಿಸಲಾಗಿದೆ. ಸಂಖ್ಯಾಪ್ರಮಾಣದ ದೃಷಗಠಿಯಿಂದ ಮೇಲ್ವರ್ಗದ ವಚನಕಾರ್ತಿಯರಿಗಿಂತಲೂ ಳಸಮುದಾಯದಿಂದ ಬಂದ ವಚನಕಾರ್ತಿಯರೇ ಆಗಿದ್ದಾರೆ. ಈ ಅರ್ಥದಲ್ಲಿ ವಚನಚಳವಳಿ ತಳಸಮುದಾಯದವರ ಸಂಘಟನಾತ್ಮಕ ಚಳವಳಿಯು ಆಗಿದೆ.

ಶ್ರಮಸಂಸ್ಕೃತಿಯಿಂದ ಬಂದ ತಳಸಮುದಾಯದ ವಚನಕಾರ್ತಿಯರು ತಮ್ಮ ಕಾಯಕ ಪರಿಭಾಷೆಯಲ್ಲಿಯೇ ವಚನರಚನೆಯಲ್ಲಿ ತೊಡಗಿದ್ದಾರೆ. ಹದಮಣ್ಣಿಲ್ಲದೆ ಮಡಿಕೆಯಾಗಲಾಗದು' ಎನ್ನುವ ಕುಂಬಾರಿಕೆ ಕೆಲಸ ನಿವಹಿಸುತ್ತಿದ್ದ ಕೇತಲದೇವಿ, ರಾಟೆಯಿಂದ ನೂಲು ತೆಗೆಯುವ ಕದಿರಕಾಐಕದಲ್ಲಿ ನಿತರಾಗಿದ್ದ ಕದಿರ ಕಾಳವ್ವೆ "ನಾ ತಿರಹುವ ರಾಟೆಯ ಕುಲಜಾತಿಯ ಕೇಳಿರಣ್ಣ ಅಡಿಯ ಹಲಗೆ ಬ್ರಹ್ಮ, ತೋರಣ ವಿಷ್ಣು, ನಿಂದ ಬೊಂಬೆ ಮಹಾರುದ್ರ: ರುದ್ರನ ಬೆಂಬಳಿಯವೆರಡು ಸೂತ್ರಕರ್ಣ, ಅರಿವೆಂಬ ಕದಿರಂ, ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ, ಸುತ್ತಿತ್ತು ನವಿಲು ಕದಿರು ತುಂಬಿತ್ತು" ಸೂಳೆ ಸಂಕವ್ವೆಯದು ಸಮಾಜ ಗೌರವಿಸದ, ಅತ್ಯಂತ ತಿರಸ್ಕೃತ ವೃತ್ತಿಯಲ್ಲಿ ಬದುಕಿ ತನ್ನ ವೃತ್ತಿಯಲ್ಲೇ ನಿಷ್ಠೆಯನ್ನು ಕಂಡವಳು. "ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ, ಹಿಡಿದಡೆ ಬತ್ತಲೆ ನಿಲಿಸಿ ಕೊಲುವರಯ್ಯ, ವ್ರತಹೀನನರಿದು ಬೆರೆದಡೆ ಕಾದ ಕತ್ತಿಯಲ್ಲಿ ಕೈ ಕಿವಿ ಮೂಗ ಕೊಯ್ವರಯ್ಯಾ, ಒಲ್ಲೆನೊಲ್ಲೆ ಬಲ್ಲಿನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ" ಎಂದು ಮನುಷ್ಯನ ಒಳಗಿನ ಕ್ರೌರ್ಯವನ್ನು ಟಕಿಸುತ್ತಾಳೆ. ಹಾಗೆಯೇ ತಾನು ಶರಣ ಧರ್ಮದ ತತ್ವಪ್ರತಿಪಾದನೆಯನದನು ಮಾಡಿ, ಅನುಸರಿಸಿ ಶ್ರೇಷ್ಠ ಶರಣೆಯು ಆಗಿದ್ದಾಳೆ. ಹಾದರ ಕಾಐಕದ ಗಂಗಮ್ಮ, ಕೊಟ್ಟಣದ ಸೋಮವ್ವೆ, ಕಾಲಕಣ್ಣಿಯ ಕಾಮಮ್ಮ ಇವರೆಲ್ಲರ ವಚನಗಳಲ್ಲೂ ಶ್ರಮಸಂಸ್ಕೃತಿಯ ಛಾಯೆಯಿದೆ.

**"ಅರ್ಚನೆ ಪೂಜೆನೆ ನೇಮವಲ್ಲ**
**ಮಂತ್ರ ತಂತ್ರ ನೇಮವಲ್ಲ**
**ಧೂಪ ದೀಪಾರತಿ ನೇಮವಲ್ಲ**
**ಪರಧನ ಪರಶ್ರೀ ಪರದೈವಂಗಳಿಗೆರಗದಿಪ್ಪುದ ನೆನೇಪು**
**ಶಂಭುಜಕ್ಕೇಶ್ವರನಲ್ಲಿ ಇವು ಕಾಣೆರಣ್ಣಾ ನಿತ್ಯನೇಮ"**[4]

ಆಂತರಿಕ ಶುದ್ಧತೆಯಿಲ್ಲದೆ ಬಾಹ್ಯ ಆಚರಣೆಗಳ ಬಗೆಗೆ, ಶಿವ ಭಕ್ತರ ಮನೆಯಂಗಳ ಗುಡಿಸುವ ಕಾಯಕದಲ್ಲಿ ನಿರತಳಾದ ಸತ್ಯಕ್ಕನ ಪ್ರತಿಕ್ರಿಯೆ ಇದು. ಬಾಹ್ಯಾಡಂಬರ ತೊರೆದು ಪರಧನ ಪರಸ್ತ್ರೀ ಆಕ್ಷೇಪಿಸಿದ ಪರದೈವಕ್ಕೆರಗದ ಮಾನಸಿಕ

ಶುದ್ಧತೆಯನ್ನು ಕಾಯ್ದುಕೊಳ್ಳಬೇಕೆಂದು ಹೇಳುವ ಧೈರ್ಯ ಶರಣೆಯದು. ಅರ್ಥವಿಲ್ಲದ ಆಚರಣೆಗಳಿಂದ ವೈಚಾರಿಕ ಪ್ರಜ್ಞೆಯಿಲ್ಲದಿರುವಂಥ ಸಮಾಜದಲ್ಲಿ ಶರಣೆಯರು ನಂಬಿದ ಈ ಮೌಲ್ಯಗಳು ಅವರ ಎತ್ತರವನ್ನು ಸೂಚಿಸುತ್ತದೆ. ಉರಿಲಿಂಗ ಪೆದ್ದಿಯ ಪತ್ನಿ ಪುಣ್ಯಸ್ತ್ರೀ ಕಾಳವ್ವೆಯ ವಚನ ಹೀಗಿದೆ:

**"ಕೃತ್ಯಕಾಯಕ ವಿಲ್ಲದವರು ಭಕ್ತರಲ್ಲ**
**ಸತ್ಯಶುದ್ಧವಿಲ್ಲದುದು ಕಾಯಕವಲ್ಲ**
**ಆಸೆಯೆಂಬುದು ಭವದಬೀಜ**
**ನಿರಾಸೆಯೆಂಬುದು ನಿತ್ಯ ಮುಕ್ತಿ**
**ಉರಿಲಿಂಗ ಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವ"**[5]

ಕಾಯಕ ಮಾಡದವರು ಭಕ್ತರಾಗಲು ಅರ್ಹರೇ ಅಲ್ಲ ಎಂದಿದ್ದಾಳೆ ಕಾಳವ್ವ ಗಾಂಧೀಜಿ ಕೂಟ ಶ್ರಮ ಮತ್ತು ಶ್ರಮ ಗೌರವವನ್ನು ಕುರಿತು ಕೆಲಸ ಮಾಡದೆ ಉಣ್ಣುವವನು ಅಹನಲ್ಲ ಎಂದಿದ್ದಾರೆ. ಶ್ರಮ ಪಡದೆ. ಗಳಿಸದೆ ತಿನ್ನುವ ಅನ್ನ, ಕಳ್ಳತನದಿಂದ ಸಂಪಾದಿಸಿದ ಅನ್ನ, ವಕೀಲನ ಕೆಲಸಕ್ಕೆ ಇರುವ ಬೆಲೆ ಕೌರಿಕನ ಕೆಲಸಕ್ಕೆ ಇದೆ ಎಂದು ಹೇಳುವ ಗಾಂಧಿ ವಿಚಾರಗಳಲ್ಲಿ ಹೇಳಿದ್ದಾರೆ.

ಲಿಂಗಾಂಗ ಸಾಮರಸ್ಯ ಬಯಸುವವರು ಮೊದಲಿಗೆ ಭಕ್ತರಾಗಬೇಕು. ಭಕ್ತನೆನಿಸಕೊಳ್ಳಲು ಕಾಯಕ ನಿರತರಾಗಬೇಕು. ಅದು ಸತ್ಯಶದ್ಧವಾಗಿರಬೇಕು. ದುರಾಸೆಯಿಂದ ಕುಡಿರಬಾರದು. ಸತ್ಯ ಶುದ್ಧ ಕಾಯಕವನ್ನು ಕೈಗೊಂಡು ಆಸೆಯನ್ನುಳಿದು ನಿರಾಸೆಯ ಮೂಲಕವಾಗಿಯೇ ಭಕ್ತ ನಿತ್ಯ ಮುಕ್ತನಾಗಬಲ್ಲ ಎಂಬ ಆಧ್ಯಾತ್ಮದ ಗಹನ ರಹಸ್ಯವನ್ನು ಕಾಳವ್ವೆ ಅತಿ ಸರಳವಾಗಿ ನಿರೂಪಿಸಿದ್ದಾಳೆ.

**"ಆವ ಕಾಯಕವ ಮಾಡಿದರೂ ಒಂದೆ ಕಾಯಕವಯ್ಯ**
**ಆವವ್ರತವಾದರೂ ಒಂದೇ ವ್ರತವಯ್ಯ**
**ಆಯ ತಪ್ಪಿದಡೆ ಸಾವಿಲ್ಲ**
**ವ್ರತ ತಪ್ಪಿದರೆ ಕೊಡಲಿಲ್ಲ**
**ರಾಕ ಪಿಕದಂತೆ ಕೂಡಲು ನಾಯಕ ನರಕ**
**ಗಂಗೇಶ್ವರ ಲಿಂಗದಲ್ಲಿ"**[6]

ಎನ್ನುತ್ತಾಳೆ ಶರಣೆ ಗಂಗಮ್ಮ. ರಾಯರ ಪ್ರಬೇಧಗಳೆಲ್ಲವೂ ಒಂದೇ ಕಾಯಕದ ಗುರಿ ಸಮಾಜೋ ಧಾರ್ಮಿಕ ಅಭಿವೃದ್ಧಿ ಆದ ಕಾರಣ ಕಾಯಕಗಳಲ್ಲಿ ಮೇಲು–ಕೀಳುಗಳೆಂಬುದಾಗಲಿ ಇಲ್ಲ. ವ್ರತಗಳೆಲ್ಲವೂ ಬಾಹ್ಯಾರೂಪದಲ್ಲಿ ವ್ಯತ್ಯಾಸಗಳನ್ನು ಪಡೆದಿದ್ದರೂ ಅವೆಲ್ಲವೂ ಭಕ್ತಿಯ ಸಾಧನಗಳು ಹೇಗೋ ಹಾಗೆಯೇ ಎಲ್ಲಾ ಬಗೆಯ ಕಾಯಕಗಳು ಆತ್ಮಸಿದ್ಧಿ ಆತ್ಮವಿಕಸನದತ್ತ ಕೊಂಡೊಯ್ಯುತ್ತವೆ. ಕಾಯಕಯವುದಾದರೇನು ಎಲ್ಲವೂ ಒಂದೆ. ನಿಜ ಮನಸ್ಸಿನಿಂದ, ಭಾವದಿಂದ ಕಾಯಕ ನಿರತರಾಗಬೇಕಷ್ಟೆ. ತನು ಮನಗಳನ್ನು ಒಂದಾಗಿಸದೆ ಕೈಗೊಳ್ಳುವ ಕೆಲಸ ಕಾಕ ಪಿಕಗಳು ಒಂದಾಗುವಂತಾಗುತ್ತದೆ.

ಅಂಥವರಿಗೆ ನರಕ ತಪ್ಪಿದ್ದಲ್ಲ ಎನ್ನುವ ಗಂಗಮ್ಮ ತನ್ನ ವ್ಯಕ್ತಿಯ ಬಗೆಗಿನ ರೀತಿ ನೀತಿಗಳನ್ನು ನಿರ್ಭಿಡೆಯಿಂದ ಅಭಿವ್ಯಕ್ತಿಸಿದ್ದಾಳೆ.

**"ನಾಡನಾಳೆ ಹೋದರೆ**
**ಆ ನಾಡು ಆಳುವ ಒಡೆಯಂಗೆನಾಡೆ ಹಗೆಯಾಯಿತು**
**ಹಗೆಯಳಿದು ನಿಸ್ಸಂಗವಾಯತು**
**ನಿಸ್ಸಂಗ ವೇದ್ಯವಾಗಿ**
**ಸಂಗಯ್ಯನಲ್ಲಿ ಮುಕ್ತಳಾದೆನು ನಾನು"**[7]

ಎಂದಿದ್ದಾಳೆ ಶರಣೆ ನೀಲಮ್ಮ. ಹನ್ನೆರಡನೆಯ ಶತಮಾನದ ಶಿವಶರಣೆಯರು ಸಾಕಷ್ಟು ಸ್ವಾತಂತ್ರವನ್ನು ಪಡೆದಿದ್ದರು. ತಮ್ಮ ಗಂಡಂದಿರರಿಗೂ ಮಾರ್ಗದರ್ಶನವನ್ನು ಮಾಡುತ್ತಿದ್ದರೆಂಬುದು ಇಲ್ಲಿ ತಿಳಿದುಬರುತ್ತದೆ. ಇದಲ್ಲದೆ ಅನುಭವ ಮಂಟಪದಲ್ಲಿ ಮುಕ್ತ ಚರ್ಚೆಯಲ್ಲಿ ಭಾಗಬಹಿಸಿ ಸಕ್ರಿಯವಾಗಿ ಕಾರ್ಯಗೈದಿದ್ದಾರೆ ಸಾಹಿತ್ಯಕ ಅಂಶಗಳನ್ನೊಳಗೊಂಡ ಸುಂದರವಾದ ವಚನ ರಚನೆಯಲ್ಲಿಯೂ ಇವರು ತೊಡಗಿದ್ದುದು ಅವರ ವೈಚಾರಿಕ ಸ್ವಾತಂತ್ರ್ಯಕ್ಕೆ ನಿದರ್ಶನಗಳಾಗಿ ನಿಂತಿದೆ. ತಮ್ಮ ಗಂಡಂದಿರರಿಗೆ ಕಾಯಕದಲ್ಲಿ ನೆರವಾಗುತ್ತ ಅದರಂತೆಯೆ ಹೆಗಲಿಗೆ ಹೆಗಲು ಹಚ್ಚಿ ದುಡಿದಿದ್ದಾರೆ. ಈ ದುಡಿಮೆಯಲ್ಲಿಯೂ ಯಾವುದೇ ಕಾಯಕ ಮಾಡುವ ಸ್ವಾಂತಂತ್ರ್ಯವನ್ನು ಅವರು ಪಡೆದು ಕೊಂಡಿದುದು ಕಂಡುಬರುತ್ತದೆ.

## ಕೊನೆ ಟಿಪ್ಪಣಿಗಳು:

1. ಶಶಿಕಲಾ ಶಿವಶಂಕರ, (2000), ದೀಪಕ್ಕೆ ದೀಪ್ತಿ, ಜ್ಞಾನೋದಯ ಪ್ರಕಾಶನ, ಬೆಂಗಳೂರು, ಪು.ಸ. 108
2. ವೀರಣ್ಣರಾಜರ (ಸಂ), (2001), ಶಿವಶರಣೆಯರ ವಚನ ಸಂಧಿ, ಕ.ಸ.ಕ.ಪು.ಪ್ರಾ., ಬೆಂಗಳೂರು, ಪು.ಸಂ. 239
3. ಅದೇ, ಪು.ಸಂ. 255
4. ಶಿವಕುಮಾರಸ್ವಾಮಿ ವಿ.ಎಂ., (1998), ಶರಣ ಜಗತ್ತು, ಅ.ರಾ.ಶ. ವಚನ ಸಾಹಿತ್ಯ ಪರಿಷತ್ತು, ಮೈಸೂರು, ಪು.ಸಂ. 198
5. ಬೀರಣ್ಣ ರಾಜೂರು, (1992), ಶಿವ ಶರಣೆಯರ ವಚನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ಪು.ಸಂ. 6
6. ತಿಪ್ಪೆರುದ್ರಸ್ವಾಮಿ ಎಚ್., (1985), ಶನ್ಯ ಸಂಪಾದನೆ ಮತ್ತು ಆಧುನಿಕ ಮೌಲ್ಯಗಳು, ಚಿತ್ತರಗಿ ಶ್ರೀ ವಿಜಯ ಮಹಾತೇಶ್ವರ ಧರ್ಮ ಪ್ರಚಾರಕ ಮಂಡಳಿ, ಇಲಕಲ್ಲು, ಪು.ಸಂ. 85
7. ಹೊಸಮನಿ ಎಸ್.ಬಿ., (2006), ಶರಹೆಂದರಮ್ಮವರು ಹರಳಯ್ಯ ನಿಮ್ಮಡಿಗೆ, ಆದಿಶಕ್ತಿ ಪ್ರಕಾಶನ, ಶಿವಮೊಗ್ಗ, ಪು.ಸಂ. 147

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.